

# ಸಾದಾ ಸೀದಾ ಸ್ವಾತಿಷ್ಟ

## ತಮಿಳಿನಲ್ಲಿ ಮಿಂಚಿ ಕನ್ನಡಕ್ಕೆ ಬಂದ ಕನ್ನಡತಿ

**‘ಒಂದು ಸರಳ ಪ್ರೇಮಕಥೆ’ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸುತ್ತಿರುವ ಸ್ವಾತಿಷ್ಟ ಕೃಷ್ಣನ್ ಅವರಿಗೆ ವಾಸ್ತವಿಕ ನೆಲೆಗಟ್ಟಿನ ಸಿನಿಮಾಗಳಲ್ಲಿ ಅಭಿನಯಿಸುವ ಆಸೆ. ಕನ್ನಡ ಸಿನಿಮಾ ರಂಗದಲ್ಲಿನ ಪ್ರತಿಭಾವಂತ ನಿರ್ದೇಶಕರು, ನಟರೊಂದಿಗೆ ಕೆಲಸ ಮಾಡಬೇಕೆನ್ನುವ ನಿರೀಕ್ಷೆ.**

**ಸುಮಲತಾ ಎನ್.**

ತಮಿಳಿನ ‘ಸವರಕತಿ’, ‘ವಿಕ್ರಮ್’ ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಸ್ವಾತಿಷ್ಟ ಕೃಷ್ಣನ್, ನಿರ್ದೇಶಕ ಸಿಂಪಲ್ ಸುನಿ ಅವರ ‘ಒಂದು ಸರಳ ಪ್ರೇಮಕಥೆ’ ಚಿತ್ರದ ಮೂಲಕ ಕನ್ನಡ ಸಿನಿಮಾ ರಂಗಕ್ಕೆ ಪದಾರ್ಪಣೆ ಮಾಡಿದ್ದಾರೆ. ವಿನಯ್ ರಾಜ್‌ಕುಮಾರ್ ಅವರಿಗೆ ನಾಯಕಿಯಾಗಿ ಸ್ವಾತಿಷ್ಟ ಕೃಷ್ಣನ್ ಅಭಿನಯಿಸುತ್ತಿದ್ದು, ಕನ್ನಡ ಭಾಷೆಯ ಇನ್ನಷ್ಟು ಸುಂದರ ಸಿನಿಮಾಗಳಲ್ಲಿ ನಟಿಸುವ ನಿರೀಕ್ಷೆಯಲ್ಲಿದ್ದಾರೆ.

ಸ್ವಾತಿಷ್ಟ ತಾಯಿ–ತಂದೆ ಮೂಲತಃ ಧಾರವಾಡದವರು. ಕೆಲಸದ ನಿಮಿತ್ತ ಚೆನ್ನೈನಲ್ಲಿ ನೆಲೆಸಿದ್ದು, ಸ್ವಾತಿಷ್ಟ ಹುಟ್ಟಿ ಬೆಳೆದದ್ದು, ಓದಿದ್ದು ಎಲ್ಲ ಚೆನ್ನೈನಲ್ಲಿಯೇ. ತಮ್ಮ ಸಿನಿಮಾಗೆ ಕನ್ನಡದ ಹುಡುಗಿಯನ್ನೇ ಹುಡುಕುತ್ತಿದ್ದ ನಿರ್ದೇಶಕ ಸುನಿ ಅವರಿಗೆ, ‘ವಿಕ್ರಮ್’ನಲ್ಲಿ ಅಭಿನಯಿಸಿದ್ದ ಸ್ವಾತಿಷ್ಟ ತಮ್ಮ ಸಿನಿಮಾಗೆ ತುಂಬಾ ಚೆನ್ನಾಗಿ ಹೊಂದುತ್ತಾರೆ ಅನ್ನಿಸಿದೆ.

ಚೆನ್ನೈನಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸ್ವಾತಿಷ್ಟ ಅವರಿಗೆ ದಿನಪತ್ರಿಕೆಯೊಂದರಲ್ಲಿ ಕೆಲಸ ಮಾಡಿದ ಅನುಭವವಿದೆ. ಸದ್ಯ, ‘ಒಂದು ಸರಳ ಪ್ರೇಮಕಥೆ’ಯಲ್ಲಿಯೂ ತಮ್ಮದು ಜರ್ನಲಿಸ್ಟ್ ಪಾತ್ರವಾಗಿದ್ದು, ಅದಕ್ಕೆ ನಾನು ಬಹಳ ಹೊಂದುತ್ತೇನೆ ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಕನ್ನಡದ ಮೇರುನಟ ರಾಜ್‌ಕುಮಾರ್ ಅವರ ಮೊಮ್ಮಗ ವಿನಯ್ ರಾಜ್‌ಕುಮಾರ್ ಅವರ ಚಿತ್ರದ ಮೂಲಕ ತಾವು ಕನ್ನಡ ಸಿನಿಮಾರಂಗ ಪ್ರವೇಶಿಸುತ್ತಿರುವುದು ತುಂಬಾ ಖುಷಿ ಸಂಗತಿ ಎನ್ನುತ್ತಾರೆ.

‘ವಿಕ್ರಮ್ ಸಿನಿಮಾ ನಂತರ ಕನ್ನಡದಲ್ಲಿ ಸಿನಿಮಾ ಅವಕಾಶ ಸಿಗುತ್ತದೆಂದು ನಾನು ನಿರೀಕ್ಷಿಸಿರಲಿಲ್ಲ. ಮೊದಲು ನಿರ್ದೇಶಕ ಸುನಿ ಅವರ ತಂಡ ಕರೆ ಮಾಡಿತು. ಆಮೇಲೆ ಆಡಿಷನ್ ನೀಡಿದೆ. ನನಗೂ ಆ ಪಾತ್ರಕ್ಕೂ ತುಂಬಾ ಹೊಂದಿಕೆ ಇದೆ ಎನಿಸಿತು. ಸುನಿ ಅವರು ಕನ್ನಡದ ಹುಡುಗಿಯನ್ನೇ ಹುಡುಕುತ್ತಿದ್ದರು. ತಂಡ, ಕಥೆ ತುಂಬಾ ಚೆನ್ನಾಗಿದೆ. ರಾಜ್‌ಕುಮಾರ್ ಸರಳತೆಗೆ ಹೆಸರುವಾಸಿ. ಅವರ ಕುಟುಂಬದ ನಟನೊಂದಿಗೆ ಕನ್ನಡಕ್ಕೆ ಪರಿಚಿತಗೊಳ್ಳುತ್ತಿದ್ದೇನೆ ಎಂಬುದೇ ಹೆಮ್ಮೆಯ ವಿಷಯ. ವಿನಯ್ ರಾಜ್‌ಕುಮಾರ್ ಅವರನ್ನು ಭೇಟಿಯಾಗಿದ್ದೇನೆ. ಅವರು ಕೂಡ ತುಂಬಾ ಸರಳ’ ಎಂದು ಸಂತಸದಿಂದ ಹೇಳಿಕೊಳ್ಳುತ್ತಾರೆ.

ತಮ್ಮ ನಟನೆಗೆ ಪರೋಕ್ಷವಾಗಿ ದಾರಿ ಮಾಡಿಕೊಟ್ಟಿದ್ದು ಪತ್ರಿಕೋದ್ಯಮ ಎನ್ನುತ್ತಾರೆ. ಬರವಣಿಗೆ ಕಾರಣಕ್ಕೆ ಸಿನಿಮಾ ನಿರ್ದೇಶಕರ ಸಂದರ್ಶನ ಮಾಡುತ್ತಿದ್ದ ಅವರಿಗೆ, ಸಿನಿಮಾಗಳಲ್ಲಿ ನಟಿಸುವ ಅವಕಾಶವೂ ಅಲ್ಲಿಂದಲೇ ಸೃಷ್ಟಿಯಾಯಿತು. ಚಿಕ್ಕವಯಸ್ಸಿನಿಂದಲೂ ಜಾಹೀರಾತುಗಳಲ್ಲಿ